KAHS610022662020

**2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯದಲ್ಲಿ**

**ಚನ್ನರಾಯಪಟ್ಟಣ**

**ಉಪಸ್ಥಿತರು : ಶ್ರೀಮತಿ ಜೋಯ್ಲಿನ್ ಮೆಂಡೋನ್ಸಾ** ಬಿ.ಎ.ಎಲ್.ಎಲ್.ಬಿ.,

2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ದಂಡಾಧಿಕಾರಿಗಳು, ಚನ್ನರಾಯಪಟ್ಟಣ.

**ದಿನಾಂಕಃ 18ನೇ ಆಗಸ್ಟ್ 2026**

**ಕ್ರಿಮಿನಲ್ ಮೊಕದ್ದಮೆ ಸಂಃ 879/2020**

ಪಿರ್ಯಾದುದಾರರು: ಸರ್ಕಾರದ ಪರವಾಗಿ

ನುಗ್ಗೇಹಳ್ಳಿ ಪೊಲೀಸ್ ಠಾಣೆ

(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)

**- ವಿರುದ್ಧ -**

ಎದುರುದಾರರು : 1. ಸುರೇಶ ಉಃ ಲವ ಬಿನ್ ಹುಚ್ಚಹನುಮಶೆಟ್ಟಿ,

36 ವರ್ಷ ವಯಸ್ಸು,

2. ಸುಂದ್ರೇಶ ಉಃ ಕುಶ ಬಿನ್ ಹುಚ್ಚಹನುಮಶೆಟ್ಟಿ,
36 ವರ್ಷ ವಯಸ್ಸು,
ಆರೋಪಿ-1 ಮತ್ತು 2 ರವರ ವಾಸಃ ಗಂಜಿಗೆರೆ ಗ್ರಾಮ,
ನುಗ್ಗೇಹಳ್ಳಿ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು,
ಹಾಸನ.

3. ಹರೀಶ ಬಿನ್ ಮಾದೇಶ,
26 ವರ್ಷ ವಯಸ್ಸು,
ವಾಸಃ ವೀರಭದ್ರೇಶ್ವರ ದೇವಸ್ಥಾನ,
ಪಾರ್ವತಮ್ಮ ವಠಾರ,
ನುಗ್ಗೇಹಳ್ಳಿ ಟೌನ್, ಮತ್ತು ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

( ಶ್ರೀ ವೈಜಿಎಂ ವಕೀಲರು)

1. ಅಪರಾಧ ಪ್ರಾರಂಭಗೊಂಡ ದಿನಾಂಕ : 25.08.2020
2. ಅಪರಾದ ವರದಿಗೊಂಡ ದಿನಾಂಕ : 25.08.2020
3. ಪಿರ್ಯಾದುದಾರರ ಹೆಸರು : ದೊಡ್ಡಯ್ಯಶೆಟ್ಟಿ
4. ಸಾಕ್ಷಿ ವಿಚಾರಣೆ ಪ್ರಾರಂಭಗೊಂಡ ದಿನಾಂಕ: 04.11.2022
5. ಸಾಕ್ಷಿ ವಿಚಾರಣೆ ಮುಕ್ತಾಯಗೊಂಡ ದಿನಾಂಕ: 23.07.2026
6. ಆಪಾದಿಸಲಾದ ಅಪರಾಧದ ಕಾಯ್ದೆಗಳು : ಭಾರತೀಯ ದಂಡ ಸಂಹಿತೆ ಕಲಂ.504, 323, 324, 506 ಸಹವಾಚಕ ಕಲಂ.34
7. ನ್ಯಾಯಾಧೀಶರ ಅಭಿಪ್ರಾಯ : **ಆರೋಪಿಗಳು ನಿರ್ದೋಷಿಗಳು**

**2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**

**ತೀರ್ಪು**

ನುಗ್ಗೇಹಳ್ಳಿ ಪೊಲೀಸ್ ಠಾಣೆಯ ಪೊಲೀಸ್ ಉಪನಿರೀಕ್ಷಕರು ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.504, 323, 324, 506 ಸಹವಾಚಕ ಕಲಂ.34 ರ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ-**

ದಿನಾಂಕ 25-08-2020 ರಂದು ಮದ್ಯಾಹ್ನ 1-20 ಗಂಟೆ ಸಮಯದಲ್ಲಿ ನುಗ್ಗೇಹಳ್ಳಿ, ಪೊಲೀಸ್ ಠಾಣಾ ಸರಹದ್ದಿನ ನುಗ್ಗೇಹಳ್ಳಿ, ಹೋಬಳಿ, ಗಂಜಿಗೆರೆ ಗ್ರಾಮದ ಸಾಕ್ಷಿ 1 ರವರು ತನ್ನ ತಮ್ಮ ಮುದ್ದಪ್ಪ ಶೆಟ್ಟಿ ರವರ ಬಾಬು ಗಂಜಿಗೆರೆ ಗ್ರಾಮದ ಸರ್ವೆ ನಂ 45 ರ ಜಮೀನಿನಲ್ಲಿ ದನಗಳನ್ನು ಮೇಯಿಸುತ್ತಿದ್ದಾಗ ಅದೇ ಸಮಯಕ್ಕೆ 1 ರಿಂದ 3 ರವರೆಗಿನ ಆರೋಪಿತರುಗಳು ಏಕೋದ್ದೇಶದಿಂದ ಸಾಕ್ಷಿ 1 ರವರ ಹತ್ತಿರ ಬಂದು ಆರೋಪಿ 1 ಮತ್ತು 2 ರವರು ಸಾಕ್ಷಿ 1 ರವರನ್ನು ಕುರಿತು ದಾರಿ ವಿಚಾರದಲ್ಲಿ ನಮ್ಮ ತಂದೆಯವರ ಮೇಲೆ ಗಲಾಟೆ ಮಾಡಿದ್ದೀರಾ ಲೋಫರ್ ನನ್ನ ಮಗನೆ, ಸೂಳೆ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈಯುತ್ತಾ 1 ನೇ ಆರೋಪಿಯು ಅಲ್ಲೇ ಬಿದ್ದಿದ ಒಂದು ದೊಣ್ಣೆಯನ್ನು ತೆಗೆದುಕೊಂಡು ಸಾಕ್ಷಿ 1 ರವರ ತಲೆಗೆ, 2 ನೇ ಆರೋಪಿಯು ಅಲ್ಲೇ ಬಿದ್ದಿದ್ದ ಒಂದು ಎಡೆಮಟ್ಟೆಯನ್ನು ತೆಗೆದುಕೊಂಡು ಬೆನ್ನಿಗೆ ಕುತ್ತಿಗೆಗೆ ಹೊಡೆದು ನೋವುಂಟು ಮಾಡಿ, 3 ನೇ ಆರೋಪಿಯು ಕೈಗಳಿಂದ ಮೈಕೈಗೆ ಹೊಡೆದು ಸಾಕ್ಷಿ 1 ರವರಿಗೆ ಸಾಮಾನ್ಯ ಸ್ವರೂಪದ ಗಾಯಪಡಿಸಿ, 1 ಮತ್ತು 2 ನೇ ಆರೋಪಿಗಳು ನನ್ನ ತಂದೆಯವರ ವಿಚಾರಕ್ಕೆ ಬಂದರೆ ನಿನಗೆ ಒಂದು ಗತಿ ಕಾಣಿಸದೆ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿ ದೊಣ್ಣೆ ಮತ್ತು ಎಡೆಮಟ್ಟೆಯನ್ನು ಅಲ್ಲೇ ಬಿಸಾಕಿ ಹೋಗಿರುವುದಾಗಿ ಆಪಾದಿಸಲಾಗಿದೆ.

3. ಚಾಸಾ-1 ರವರು ನೀಡಿದ ಹೇಳಿಕೆಯ ದೂರನ್ನು ಪಡೆದುಕೊಂಡು ನುಗ್ಗೇಹಳ್ಳಿ ಪೊಲೀಸನವರು ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ರವಾನಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು ತನಿಖೆಯನ್ನು ನಡೆಸಿ, ಕೃತ್ಯ ಸ್ಥಳಕ್ಕೆ ಭೇಟಿ ನೀಡಿ, ಪಂಚನಾಮೆಯನ್ನು ಜರುಗಿಸಿ, ಸಾಕ್ಷಿದಾರರ ಹೇಳಿಕೆಯನ್ನು ದಾಖಲಿಸಿಕೊಂಡು, ತನಿಖೆಯು ಪೂರ್ಣಗೊಂಡ ನಂತರ ಆರೋಪಿ ವಿರುದ್ಧ ಸಾಕಷ್ಟು ಸಾಕ್ಷ್ಯ ಸಂಗ್ರಹಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

4. ಅಂತಿಮ ವರದಿಯನ್ನು ಸಲ್ಲಿಸಿದ ನಂತರದಲ್ಲಿ ಆರೋಪಿಗಳಿಗೆ ಸಮನ್ಸ್ ಜಾರಿ ಮಾಡಲಾಗಿದ್ದು, ಸಮನ್ಸ್ ಜಾರಿಯಾದ ನಂತರ ಆರೋಪಿ ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆ. ನಂತರದಲ್ಲಿ ಸೂಕ್ತ ಜಾಮಿನೀನ ಮೇಲೆ ಬಿಡುಗಡೆ ಮಾಡಲಾಗಿರುತ್ತದೆ. ಆರೋಪಿತರಿಗೆ ದಂಡ ಪ್ರಕ್ರಿಯಾ ಸಂಹಿತೆಯ ಕಲಂ ೨೦೭ ರ ಅನ್ವಯ ದೋಷಾರೋಪಣ ಪಟ್ಟಿ ಹಾಗೂ ಹಾಗೂ ಅದಕ್ಕೆ ಲಗತ್ತಾದ ದಾಖಲಾತಿಗಳ ಪ್ರತಿಗಳನ್ನು ಒದಗಿಸಲಾಗಿರುತ್ತದೆ. ಆರೋಪಿತರ ಪರ ಹಾಗೂ ಅಭಿಯೋಜನೆ ಪರ ಆರೋಪಣಾ ಪೂರ್ವ ವಾದವನ್ನು ಆಲಿಸಲಾಗಿರುತ್ತದೆ. ಅಭಿಯೋಜನೆ ಪರ ಹಾಜರು ಪಡಿಸಿದ ದಾಖಲಾತಿಗಳಲ್ಲಿ ಆರೋಪಿಗಳ ವಿರುದ್ಧ ಆರೋಪಣೆಯನ್ನು ರಚಿಸಲು ಮೇಲ್ನೋಟಕ್ಕೆ ಸಾಕಷ್ಟು ಅಂಶಗಳು ಇದ್ದ ಕಾರಣ ಆರೋಪಿಗಳ ವಿರುದ್ಧ ಆಪಾದನೆಯನ್ನು ರಚಿಸಿ, ಅವರಿಗೆ ಓದಿ ವಿವರಿಸಿ ಹೇಳಲಾಗಿ ಅವರು ಆರೋಪಣೆಯನ್ನು ನಿರಾಕರಿಸಿದ್ದು, ವಿಚಾರಣೆಯನ್ನು ಬಯಸಿದ ಮೇರೆಗೆ ಪ್ರಕರಣವನ್ನು ಅಭಿಯೋಜನೆಯ ಪರ ಸಾಕ್ಷಿದಾರರ ವಿಚಾರಣೆಗೆ ನಿಗದಿಪಡಿಸಲಾಗಿರುತ್ತದೆ.

5. ಆರೋಪಿತರ ವಿರುದ್ಧ ಮಾಡಲಾದ ಆರೋಪಣೆಗಳನ್ನು ಸಾಬೀತುಪಡಿಸಲು ಅಭಿಯೋಜನೆಯ ಪರ ಅ.ಸಾ.1 **ರಿಂದ** ಅ.ಸಾ.6 ಸಾಕ್ಷಿದಾರರನ್ನು ಹಾಗೂ ನಿ.ಪಿ.1 ರಿಂದ ನಿ.ಪಿ.8 ರವರೆಗೆ ದಾಖಲಾತಿಗಳನ್ನು ಹಾಜರುಪಡಿಸಲಾಗಿರುತ್ತದೆ .ಮುದ್ದೆ ಮಾಲು.1 ಮತ್ತು 2 ಗುರುತಿಸಲಾಯಿತು. ನೊಂದ ವ್ಯಕ್ತಿ ಹಾಗೂ ಫಿರ್ಯಾದುದಾರರದ ಚಾಸ1 ರವರಿಗೆ ಸಮನ್ಸ್ ಮಾಡಿದಾಗ, ಚಾಸ1 ರವರು ಮೃತರಾಗಿರುವುದಾಗಿ ಪೊಲೀಸರು ಹಿಂಬರಹವನ್ನು ನೀಡಿರುತ್ತಾರೆ. ಆದ್ದರಿಂದ ಚಾಸ1 ರವರನ್ನು ವಿಚಾರಣೆಯಿಂದ ಕೈ ಬಿಡಲಾಗಿದೆ. ಅಭಿಯೋಜನೆಯ ಪರ ಸಾಕ್ಷಿದಾರರ ವಿಚಾರಣೆಯು ಮುಕ್ತಾಯವಾದ ನಂತರದಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು. ಆರೋಪಿಯು ಸಾಕ್ಷಿದಾರರ ಸಾಕ್ಷ್ಯದಲ್ಲಿನ ಆಪಾದನಾ ಪೂರಕವಾದ ಅಂಶಗಳನ್ನು ಅಲ್ಲಗಳೆದಿದ್ದು, ತನ್ನ ಪರ ಯಾವುದೇ ಸಾಕ್ಷಿದಾರರನ್ನು ವಿಚಾರಣೆ ಮಾಡಿರುವುದಿಲ್ಲ. ನಂತರದಲ್ಲಿ ಪ್ರಕರಣವನ್ನು ಉಭಯತ್ರರ ವಾದ ಮಂಡನೆಗಾಗಿ ನಿಗದಿಪಡಿಸಲಾಗಿರುತ್ತದೆ.

6. ಅಭಿಯೋಜನೆಯ ಪರ ಹಾಗೂ ಆರೋಪಿತರ ಪರ ವಕೀಲರ ವಾದವನ್ನು ಆಲಿಸಲಾಯಿತು. ಅಭಿಯೋಜನೆಯ ಪರ ಹಾಜರುಪಡಿಸಲಾದ ದಾಖಲಾತಿಗಳನ್ನು ಅವಲೋಕಿಸಲಾಗಿರುತ್ತದೆ.

7. ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಲಾದ ಸಾಕ್ಷ್ಯಾಧಾರಗಳನ್ನು ಅವಲೋಕಿಸಿದ ಸಂದರ್ಭದಲ್ಲಿ ಕೆಳಕಂಡ ಅಂಶಗಳು ಪರಿಗಣನೆಗೆ ಉದ್ಭವಿಸಿರುತ್ತದೆ.

**ಅಂಶ.1 : ದಿನಾಂಕಃ 25-08-2020 ರಂದು ಮದ್ಯಾಹ್ನ 1.20 ಗಂಟೆ ಸಮಯದಲ್ಲಿ, ನುಗ್ಗೇಹಳ್ಳಿ, ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ, ಗಂಜಿಗೆರೆ ಗ್ರಾಮದ ಸಾಕ್ಷಿ-1 ದೊಡ್ಡಯ್ಯಶೆಟ್ಟಿ ತನ್ನ ತಮ್ಮ ಮುದ್ದಪ್ಪಶೆಟ್ಟಿ ರವರ ಬಾಬು ಗಂಜಿಗೆರೆ ಗ್ರಾಮದ ಸರ್ವೆ ನಂ.45 ರ ಜಮೀನಿನಲ್ಲಿ ದನಗಳನ್ನು ಮೇಯಿಸುತ್ತಿದ್ದಾಗ, ಅದೇ ಸಮಯಕ್ಕೆ 1 ರಿಂದ 3 ನೇ ಆರೋಪಿಗಳಾದ ನೀವು ಏಕೋದ್ದೇಶದಿಂದ ಸಾಕ್ಷಿ-1 ರವರ ಹತ್ತಿರ ಬಂದು, 1 ಮತ್ತು 2 ನೇ ಆರೋಪಿತರಾದ ನೀವು ಸಾಕ್ಷಿ-1 ರವರನ್ನು ಕುರಿತು ಅವರು ಕುಪಿತರಾಗಿ ಶಾಂತಿಭಂಗವನ್ನುಂಟುಮಾಡಲಿ ಎಂಬ ಉದ್ದೇಶದಿಂದ, ದಾರಿ ವಿಚಾರದಲ್ಲಿ ನಮ್ಮ ತಂದೆಯವರ ಮೇಲೆ ಗಲಾಟೆ ಮಾಡಿದ್ದೀರಾ ಲೋಫರ್ ನನ್ನ ಮಗನೆ, ಸೂಳೆ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ. ಕಲಂಃ 504 ಸಹವಾಚಕ ಕಲಂಃ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದ್ದರೆಯೇ?**

**ಅಂಶ.2 : ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶವನ್ನು ಹೊಂದಿ, ನಿಮ್ಮ ಸ್ವ ಇಚ್ಚೆಯಿಂದ, 3 ನೇ ಆರೋಪಿತರಾದ ನೀವು ಸಾಕ್ಷಿ-1 ರವರಿಗೆ ಕೈಗಳಿಂದ ಮೈಕೈಗೆ ಹೊಡೆದು**

ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ. ಕಲಂಃ **323** ಸಹವಾಚಕ ಕಲಂಃ **34** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದ್ದರೆಯೇ?

ಅಂಶ.**3** : ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶವನ್ನು ಹೊಂದಿ, ನಿಮ್ಮ ಸ್ವ ಇಚ್ಛೆಯಿಂದ, **1**ನೇ ಆರೋಪಿಯಾದ ನೀವು ಒಂದು ದೊಣ್ಣೆಯನ್ನು ತೆಗೆದುಕೊಂಡು ಸಾಕ್ಷಿ-**1** ರವರ ತಲೆಗೆ, **2** ನೇ ಆರೋಪಿಯಾದ ನೀವು ಮಾರಕಾಯುಧವಾದ ಒಂದು ಎಡಮಟ್ಟೆಯನ್ನು ತೆಗೆದುಕೊಂಡು ಸಾಕ್ಷಿ-**1** ರವರ ಬೆನ್ನಿಗೆ, ಕುತ್ತಿಗೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ. ಕಲಂಃ **324** ಸಹವಾಚಕ ಕಲಂಃ **34** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದ್ದರೆಯೇ?

ಅಂಶ.**4** : ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶವನ್ನು ಹೊಂದಿ, **1** ಮತ್ತು **2**ನೇ ಆರೋಪಿತರಾದ ನೀವು ಸಾಕ್ಷಿ-**1** ರವರಿಗೆ ನನ್ನ ತಂದೆಯವರ ವಿಚಾರಕ್ಕೆ ಬಂದರೆ ನಿನಗೆ ಒಂದು ಗತಿ ಕಾಣಿಸದೇ ಬಿಡುವುದಿಲ್ಲ ಎಂದು ಕೊಲೆ ಮಾಡುವುದಾಗಿ ಅಪರಾಧಿಕ ಭಯೋತ್ಪಾದನೆ ಉಂಟುಮಾಡಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ. ಕಲಂಃ **506** ಸಹವಾಚಕ ಕಲಂಃ **34** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದ್ದರೆಯೇ?

**ಅಂಶ.5 : ಯಾವ ಆದೇಶ?**

8. ಅಭಿಯೋಜನೆಯ ಪರ ಹಾಜರುಪಡಿಸಲಾದ ಸಾಕ್ಷ್ಯಾಧಾರಗಳನ್ನು ಅವಲೋಕಿಸಿದ ಸಂದರ್ಭದಲ್ಲಿ ಸದರಿ ಅಂಶಗಳನ್ನು ಕೆಳಗಿನಂತೆ ಉತ್ತರಿಸಲಾಗಿದೆ.

ಅಂಶ.1 : ನಕಾರಾತ್ಮಕವಾಗಿ

ಅಂಶ.2 : ನಕಾರಾತ್ಮಕವಾಗಿ

ಅಂಶ.3 : ನಕಾರಾತ್ಮಕವಾಗಿ

ಅಂಶ.4 : ನಕಾರಾತ್ಮಕವಾಗಿ

ಅಂಶ.5 : ಅಂತಿಮ ಆದೇಶದಂತೆ

**ಕಾರಣಗಳು**

9. **ಅಂಶ 1 ರಿಂದ 4** : ಸಾಕ್ಷ್ಯಗಳ ಪುನರಾವರ್ತನೆಯನ್ನು ತಪ್ಪಿಸಲು ಎಲ್ಲಾ ಅಂಶಗಳನ್ನು ಏಕಕಾಲದಲ್ಲಿ ವಿಶ್ಲೇಷಿಸಲಾಗುತ್ತದೆ ಮತ್ತು ನಿರ್ಧರಿಸಲಾಗುತ್ತದೆ. ಭಾರತೀಯ ಸಾಕ್ಷ್ಯ ಕಾಯ್ದೆ 1872 ರ ಸೆಕ್ಷನ್ 102 ರ ಪ್ರಕಾರ ಅಂಶಗಳನ್ನು ಸಾಬೀತುಪಡಿಸುವ ಹೊರೆ ಅಭಿಯೋಜನೆಯ ಮೇಲೆ ಇರುತ್ತದೆ. ಕ್ರಿಮಿನಲ್ ಪ್ರಕರಣದಲ್ಲಿ ಆರೋಪಿಯು ಏನನ್ನೂ ಸಾಬೀತುಪಡಿಸುವ ಅಗತ್ಯವಿಲ್ಲ ಎಂಬುದು ಚೆನ್ನಾಗಿ ಹೇಳಲಾಗಿದೆ. ಕ್ರಿಮಿನಲ್ ನ್ಯಾಯಶಾಸ್ತ್ರದ ಒಂದು ಪ್ರಮುಖ ತತ್ವವೆಂದರೆ, ಅಭಿಯೋಜನೆಯು ತನ್ನ ಪ್ರಕರಣವನ್ನು ಸಮಂಜಸವಾದ ಅನುಮಾನಗಳನ್ನು ಮೀರಿ ವಿಶ್ವಾಸಾರ್ಹ, ಸ್ಪಷ್ಟ ಮತ್ತು ಮನವರಿಕೆಯಾಗುವ ಪುರಾವೆಗಳನ್ನು ನೀಡುವ ಮೂಲಕ ಸಾಬೀತುಪಡಿಸಬೇಕು. ಇದಲ್ಲದೆ, ಆರೋಪಿಯ ತಪ್ಪನ್ನು ಯಶಸ್ವಿಯಾಗಿ ಮನವರಿಕೆ ಮಾಡಿಕೊಳ್ಳಲು, ಅಭಿಯೋಜನೆ ತನ್ನದೇ ಆದ ಕಾಲುಗಳ ಮೇಲೆ ನಿಲ್ಲಬೇಕು ಮತ್ತು ಆರೋಪಿಯ ರಕ್ಷಣೆಯಲ್ಲಿನ ದೌರ್ಬಲ್ಯದಿಂದ ಯಾವುದೇ ಪ್ರಯೋಜನವನ್ನು ಪಡೆಯಲು ಸಾಧ್ಯವಿಲ್ಲ ಎಂಬುದು ಕ್ರಿಮಿನಲ್ ಕಾನೂನಿನ ಸ್ಥಿರ ಪ್ರತಿಪಾದನೆಯಾಗಿದೆ. ಅಭಿಯೋಜನೆಯ ಪ್ರತಿಯೊಂದು ಸಮಂಜಸವಾದ ಅನುಮಾನದ ಲಾಭವನ್ನು ಆರೋಪಿಯು ಪಡೆಯುತ್ತಾನೆ ಮತ್ತು ಅಭಿಯೋಜನೆ ಪ್ರಕರಣದಲ್ಲಿ ಅಂತಹ ಯಾವುದೇ ಸಂದೇಹವು ಆರೋಪಿಯನ್ನು ಖುಲಾಸೆಗೊಳಿಸಲು ಅರ್ಹಗೊಳಿಸುತ್ತದೆ.

10. ಮೇಲಿನ ತತ್ವವನ್ನು ಮನಸ್ಸಿನಲ್ಲಿಟ್ಟುಕೊಂಡು, ಈಗ ಆಯಾ ಅಪರಾಧಗಳ ಅಂಶಗಳು ಮತ್ತು ಕಾನೂನು ಪರಿಕಲ್ಪನೆಗಳನ್ನು ಅನುಸರಿಸಲು ಅಭಿಯೋಜನೆ ಸಾಕ್ಷ್ಯಗಳು ಸಾಕಾಗುತ್ತದೆಯೇ ಎಂದು ಪರಿಗಣಿಸಲು ಮುಂದುವರಿಯೋಣ.

11. ಆರೋಪಿ ವಿರುದ್ದ ಮಾಡಲಾದ ಆಪಾದನೆಗಳನ್ನು ಸಾಬೀತುಪಡಿಸಲು ಅಭಿಯೋಜನೆಯ ಪರ ಅ.ಸಾ. 1 ರಿಂದ ಅಸಾ 6 ಸಾಕ್ಷಿಯನ್ನು ವಿಚಾರಣೆ ಮಾಡಲಾಗಿರುತ್ತದೆ. ಅ.ಸಾ.1 ಮತ್ತು ಅ.ಸಾ.2 ಪ್ರತ್ಯಕ್ಷದರ್ಶಿ ಸಾಕ್ಷಿದಾರರಾಗಿರುತ್ತಾರೆ. ಅ.ಸಾ.3 ರವರು ಚಾಸ1 ರವರಿಗೆ ಚಿಕಿತ್ಸೆ ನೀಡಿದ ವೈದ್ಯಾಧಿಕಾರಿಗಳಾಗಿರುತ್ತಾರೆ. ಅ.ಸಾ.4 ಮತ್ತು ಅ.ಸಾ.6 ರವರು ಘಟನ ಸ್ಥಳದ ಮಹಜರ್ ಪಂಚ ಸಾಕ್ಷಿದಾರರಾಗಿರುತ್ತಾರೆ. ಅ.ಸಾ.5 ರವರು ತನಿಖಾದಿಗಳಾಗಿರುತ್ತಾರೆ.

12. ಅಭಿಯೋಜನೆಯವರು ಪ್ರತ್ಯಕ್ಷದರ್ಶಿ ಸಾಕ್ಷಿದಾರರ ಚಾ.ಸಾ.3 ರವರನ್ನು ಅಸಾ.1 ರವರನ್ನಾಗಿ ವಿಚಾರಣೆಗೊಳಪಡಿಸಿದ್ದು, ಸದರಿಯವರು ತಮ್ಮ ವಿಚಾರಣೆಯಲ್ಲಿ ಚಾಸಾ-1, 2 ಹಾಗೂ ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತು ಎಂದು ನುಡಿದಿದ್ದು, 1 ಮತ್ತು 2 ನೇ ಆರೋಪಿತರು ಚಾಸಾ-1 ರವರ ತಮ್ಮನ ಮಕ್ಕಳು ಆಗಿದ್ದು, ಚಾಸಾ-1 ರವರು 7-8 ತಿಂಗಳ ಹಿಂದೆ ಮೃತಪಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಅಸಾ.1 ರವರು ಮುಂದುವರೆದು ಹೇಳುವುದೇನೆಂದರೆ ಆತನಿಗೆ, ಚಾಸಾ-1 ಮತ್ತು ಚಾಸಾ-2 ರವರ ಜಮೀನಿನ ಸ್ವಲ್ಪ ಮುಂದೆ ಗಂಜಿಗೆರೆ ಗ್ರಾಮದಲ್ಲಿ ತನ್ನ ತೋಟದ ಜಮೀನು ಇದ್ದು, ಸುಮಾರು 2 ವರ್ಷಗಳ ಹಿಂದೆ ಮದ್ಯಾಹ್ನ 12 ರಿಂದ 1 ಗಂಟೆಯ ಸಮಯದಲ್ಲಿ ನನ್ನ ಜಮೀನಿನ ಬಳಿಯಿಂದ ಊಟಕ್ಕೆಂದು ಮನೆಗೆ ಬರುತ್ತಿದ್ದ ಸಮಯದಲ್ಲಿ, ಚಾಸಾ-1 ರವರು ತಮ್ಮ ಜಮೀನಿನ ಕಡೆಯಿಂದ ನಡೆದುಕೊಂಡು ಬರುತ್ತಿದ್ದರು ಮತ್ತು ನನ್ನ ತಮ್ಮನ ಮಕ್ಕಳು ನನ್ನ ಮೇಲೆ ಹಲ್ಲೆ ಮಾಡಿದ್ದಾರೆ ನನ್ನನ್ನು ಮನೆಯ ಹತ್ತಿರ ಬಿಡು ಎಂದು ಕೇಳಿದ್ದು, ನನ್ನ ಬೈಕಿನಲ್ಲಿ ಚಾಸಾ -1 ರವರನ್ನು ಊರಿನ ಒಳಗೆ ತಂದು ಬಿಟ್ಟಿದ್ದು, ಚಾಸಾ-1 ರವರಿಗೆ

ಏನಾಯಿತು ಎಂಬ ವಿಚಾರ ನಾನು ಕೇಳಿರುವುದಿಲ್ಲ ಹಾಗೂ ಗಲಾಟೆಯ ವಿಚಾರವಾಗಿ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಅಭಿಯೋಜನೆಯು ಪ್ರತಿಪಾದಿಸುವ ಘಟನೆಯನ್ನು ಅ.ಸಾ.1 ರವರು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಅ.ಸಾ.1 ರವರು ಸಂಪೂರ್ಣವಾಗಿ ಪ್ರತಿಕೂಲರಾಗಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅ.ಸಾ.1 ರವರು ತಮ್ಮ ವಿಚಾರಣೆಯಲ್ಲಿ ಪ್ರಕರಣದ ಯಾವುದೇ ವಿಚಾರಗಳು ಗೊತ್ತಿಲ್ಲವೆಂದು ಹಾಗೂ ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲವೆಂದು, ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿದಿರುವುದಿಲ್ಲವೆಂದು ಹಾಗೂ ಪ್ರಾಣ ಬೆದರಿಕೆ ಹಾಕಿರುವುದಿಲ್ಲವೆಂದು ನುಡಿದಿರುತ್ತಾರೆ. ಅಲ್ಲದೇ, ಪೊಲೀಸರಿಗೆ ಹೇಳಿಕೆಯನ್ನು ನೀಡಲಾಗಿದೆ ಎಂಬುದು ಅಭಿಯೋಜನೆಯ ಪ್ರತಿಪಾದನೆಯಾಗಿದ್ದು, ಆದರೆ ಅ.ಸಾ. 1 ರವರು ಸದರಿ ಅಂಶಕ್ಕೆ ಪೂರಕವಾಗುವಂತಹ ಯಾವುದೇ ಅಂಶವನ್ನು ನುಡಿದಿರುವುದಿಲ್ಲ. ಅ.ಸಾ. 1 ರವರು ಅಭಿಯೋಜನೆಯ ಪ್ರತಿಪಾದನೆಗೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ನಿಪಿ-1 ರಂತೆ ಹೇಳಿಕೆ ನೀಡಿರುವುದನ್ನು ಅಲ್ಲಗಳೆದಿರುತ್ತಾರೆ. ಆದ್ದರಿಂದ, ಅಭಿಯೋಜನೆಯವರು ಅಸಾ-1 ರವರನ್ನು ಪ್ರತಿಕೂಲ ಸಾಕ್ಷಿ ಎಂದ ಪರಿಗಣಿಸಿ ಪಾಟೀ ಸವಾಲು ಮಾಡಿದ್ದು, ಅಭಿಯೋಜನೆಯ ಪರ ಪಾಟೀ ಸವಾಲು ಮಾಡಲಾಗಿದ್ದು, ಪಾಟಿ ಸವಾಲಿನಲ್ಲಿಯೂ ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾದಂತಹ ಯಾವುದೇ ಅಂಶಗಳನ್ನು ಸಾಕ್ಷಿದಾರ ನುಡಿದಿರುವುದಿಲ್ಲ. ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

13. ಅಭಿಯೋಜನೆಯವರು ಪ್ರತ್ಯಕ್ಷದರ್ಶಿ ಸಾಕ್ಷಿದಾರರ ಚಾ.ಸಾ.2 ರವರನ್ನು ಅಸಾ.2 ಎಂದು ಒಳಪಡಿಸಿರುತ್ತಾರೆ. ಸದರಿಯವರು ತಮ್ಮ ವಿಚಾರಣೆಯಲ್ಲಿ ಚಾಸಾ-1 ಅಣ್ಣನಾಗಿದ್ದು, 1 ರಿಂದ 3 ನೇ ಆರೋಪಿತರು ಹಾಗೂ ಚಾಸಾ-3 ರಿಂದ 5 ಗೊತ್ತು ಎಂದು ನುಡಿದಿರುತ್ತಾರೆ. ಅಸಾ.2 ರವರು ಮುಂದುವರೆದು ಹೇಳುವುದೇನೆಂದರೆ 4 ವರ್ಷಗಳ ಹಿಂದೆ ದೀಪಾವಳಿಯ ಸಮಯದಲ್ಲಿ ನಾವು ನಮ್ಮ ತೋಟದಲ್ಲಿದ್ದಾಗ, ಚಾಸಾ-1 ರವರು ದನಕರು,

ಕುರಿಗಳನ್ನು ಮೇಯಿಸುತ್ತಿದ್ದಾಗ 1 ರಿಂದ 3 ನೇ ಆರೋಪಿತರು ಮಧ್ಯಾಹ್ನ 01-00 ಗಂಟೆ ಸಮಯದಲ್ಲಿ ಬಂದು, 1ನೇ ಆರೋಪಿಯು ದೊಣ್ಣೆಯಿಂದ ಹಾಗೂ 2ನೇ ಆರೋಪಿಯು ಎಡಮಟ್ಟೆಯಿಂದ ಚಾಸಾ-1 ರವರ ತಲೆ ಮತ್ತು ಬೆನ್ನಿಗೆ ದಾರಿಯ ವಿಚಾರವಾಗಿ ಹೊಡೆದಿದ್ದು ತಾನು ಒಬ್ಬನೇ ಹೋಗಿ ಬಿಡಿಸಿ, ನಂತರ ಚಾಸಾ-1 ರವರನ್ನು ಆಸ್ಪತ್ರೆಗೆ ದಾಖಲು ಮಾಡಿದ್ದು ಮೂರು ತಿಂಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ಚಾಸಾ-1 ರವರು ಮರಣ ಹೊಂದಿರುತ್ತಾರೆ ಎಂದು ನುಡಿದಿರುತ್ತಾರೆ. ಚಾಸಾ-3 ರವರು ಚಾಸಾ-1 ರವರನ್ನು ಘಟನಾ ಸ್ಥಳದಿಂದ ಊರಿಗೆ ಕರೆದುಕೊಂಡು ಬಂದಿದ್ದು ನಂತರ ಊರಿನಿಂದ ನುಗ್ಗೇಹಳ್ಳಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿರುತ್ತದೆ. ತಾನು ಹಾಗೂ ಚಾಸಾ-1 ರವರು ಪೊಲೀಸರಿಗೆ ಹೇಳಿಕೆಯನ್ನು ನೀಡಿರುವುದಾಗಿ ನುಡಿದಿರುತ್ತಾರೆ.

14. ನಂತರ ಪೊಲೀಸರು ಘಟನಾ ಸ್ಥಳಕ್ಕೆ ಬಂದು ನಾನು ತೋರಿಸಿದ ಸ್ಥಳದಲ್ಲಿ ಒಂದು ದೊಣ್ಣೆ ಮತ್ತು ಎಡ ಮಟ್ಟೆಯನ್ನು ಮಹಜರನ ಸಮಯದಲ್ಲಿ ಅಮಾನತು ಪಡಿಸಿಕೊಂಡಿರುವುದಾಗಿ ನುಡಿದಿರುತ್ತಾರೆ. ಸಾಕ್ಷಿಯು ಮಹಜರಿನಲ್ಲಿನ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು ತನ್ನೊಂದಿಗೆ ಚಾಸಾ-4 ರವರು ಮಹಜರಿಗೆ ಸಹಿ ಮಾಡಿರುವುದಾಗಿ ನುಡಿದಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ದೊಣ್ಣೆ ಮತ್ತು ಎಡಮಟ್ಟೆಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಅಭಿಯೋಜನೆಯವರು ಅಸಾ-2 ರವರನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದ್ದು, ಪಾಟಿ ಸವಾಲಿನಲ್ಲಿಯೂ ಘಟನೆಯು ದಿನಾಂಕ 25.08.2020 ರಂದು ನಡೆದಿದ್ದು, ಆರೋಪಿತರು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಒಂದನೇ ಆರೋಪಿಯು ಚಾಸಾ-1 ರವರಿಗೆ ಮುದ್ದೆಮಾಲು1 ರಿಂದ ಕುತ್ತಿಗೆಗೆ ಮತ್ತು ಬೆನ್ನಿಗೆ ಹೊಡೆದಿದ್ದು, ಎರಡನೇ ಆರೋಪಿಯು ಮುದ್ದೆಮಾಲು2 ರಿಂದ ಚಾಸ 1ರವರ ತಲೆಗೆ ಗುತ್ತಿಗೆ ಮತ್ತು ಬೆನ್ನಿಗೆ ಹೊಡೆದಿದ್ದು, ಮೂರನೇ ಆರೋಪಿಯು ಚಾಸಾ-1 ರವರಿಗೆ ಕೈಗಳಿಂದ ಹೊಡೆದಿದ್ದು, ಸದರಿ ಗಲಾಟೆಯನ್ನು ತಾನು ಹಾಗೂ ಚಾಸ 3ರವರು ಹೋಗಿ ಬಿಡಿಸಿದ್ದು, ನಂತರ ಆರೋಪಿತರು ಮುದ್ದೆಮಾಲು 1

ಮತ್ತು 2 ಘಟನಾ ಸ್ಥಳದಲ್ಲಿ ಬಿಸಾಡಿ ಚಾಸಾ-1 ರವರಿಗೆ ಕೊಲೆ ಬೆದರಿಕೆ ಹಾಕಿ ಹೋಗಿದ್ದು, ತಾನು ಚಾಸಾ-1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ದಿನಾಂಕ 26.08.2020 ರಂದು ಬೆಳಗ್ಗೆ 10 ಗಂಟೆಯಿಂದ 11 ಗಂಟೆಯವರೆಗೆ ಗಂಜಿಗೆರೆ ಗ್ರಾಮದ ಮುತ್ತಪ್ಪ ಶೆಟ್ಟಿ ರವರ ಸರ್ವೇ ನಂಬರ್ 45ರ ಜಮೀನಿನಲ್ಲಿ ಮಹಜರ ಜರುಗಿಸಿದ್ದು ಸದರಿ ಮಹಜರಿಗೆ ತಾನು ಹಾಗೂ ಚಾಸಾ-3ರವರು ಸಹಿ ಮಾಡಿದ್ದು ಅದರಲ್ಲಿರುವ ಎಲ್ಲಾ ವಿಚಾರಗಳು ತನಗೆ ಗೊತ್ತಿರುತ್ತದೆ ಎಂದು ಅಭಿಯೋಜನೆಯವರು ಸೂಚಿಸಿದಾಗ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಅ.ಸಾ.2 ರವರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿರುತ್ತಾರೆ. ಪಾಟಿ ಸವಾಲಿನಲ್ಲಿ ಆರೋಪಿಗಳ ತಂದೆ ತನ್ನ ಸಹೋದರವೆಂದು ಹಾಗೂ ತಮ್ಮ ಕುಟುಂಬದಲ್ಲಿ ಜಮೀನನ್ನು ಹಂಚಿಕೊಂಡು ಅದರಂತೆ ಸ್ವಾಧೀನದಲ್ಲಿದ್ದು, ಪರಸ್ಪರ ಒಬ್ಬರೊಬ್ಬರ ಜಮೀನಿನ ದಾರಿಯಲ್ಲಿ ಇನ್ನೊಬ್ಬರ ಜಮೀನನ್ನು ತಲುಪಬೇಕು ಎಂಬ ಆರೋಪಿ ಪರ ವಕೀಲರ ಸೂಚನೆಯನ್ನು ಅ.ಸಾ.2 ರವರು ಒಪ್ಪಿಕೊಂಡಿರುತ್ತಾರೆ. ಅವರ ಹಾಗೂ ಆರೋಪಿತರ ನಡುವೆ ದಾರಿಯ ಕುರಿತು ವೈ ಮನಸ್ಸು ಇದೆ ಎಂದು ಒಪ್ಪಿಕೊಂಡಿರುತ್ತಾರೆ. ಗಲಾಟೆ ನಡೆದ ದಿನಾಂಕ, ವಾರ ಮತ್ತು ವರ್ಷ ನಿಖರವಾಗಿ ಹೇಳಲು ಆಗುವುದಿಲ್ಲವೆಂದು, ಗಲಾಟೆ ನಡೆದ ಸಮಯದಲ್ಲಿ ತಾನು ತೋಟದಲ್ಲಿದ್ದು, ಸದರಿ ತೋಟದಿಂದ ಘಟನಾ ಸ್ಥಳಕ್ಕೆ ಕಾಲು ಕಿ.ಮೀ ಅಂತರ ಇರುವುದಾಗಿ ನುಡಿದಿರುತ್ತಾರೆ. ಘಟನೆಯದ ಸಂದರ್ಭದಲ್ಲಿ ತಾನು ಒಬ್ಬನೇ ಇದ್ದು, ನಂತರ ಚಾಸ 1 ಬಂದಿರುವುದಾಗಿ ನುಡಿದಿದ್ದು, ಆರೋಪಿತರು ಚಾಸ 1 ರವರೊಂದಿಗೆ ಗಲಾಟೆ ಆಗುವಾಗ ತಾನು ತೋಟದಲ್ಲಿದ್ದು, ತಾನು ಘಟನಾ ಸ್ಥಳಕ್ಕೆ ಹೋಗುವ ವೇಳೆಗೆ ಗಲಾಟೆ ಮುಗಿದು ಹೋಗಿರುತ್ತದೆ ಎಂದು ನುಡಿದಿರುತ್ತಾರೆ. ಪೊಲೀಸರು ಯಾವ ದಿನಾಂಕದಂದು ತನ್ನ ಹೇಳಿಕೆಯನ್ನು ಪಡೆದುಕೊಂಡರು ಎಂದು ನೆನಪಿಲ್ಲವೆಂದು ಹಾಗೂ ಹೇಳಿಕೆಯಲ್ಲಿನ ವಿಚಾರಗಳು ಹೇಳಲಾಗುವುದಿಲ್ಲವೆಂದು ನುಡಿದಿರುತ್ತಾರೆ.

15. ಘಟನೆಯಾದ ಮೂರು ದಿನಗಳ ನಂತರ ಪೊಲೀಸರು ಘಟನಾ ಸ್ಥಳಕ್ಕೆ ಬಂದು ತನ್ನ ಹಾಗೂ ಚಾಸ 4 ರವರ ಸಮಕ್ಷಮ ಮಧ್ಯಾಹ್ನ 3 ಗಂಟೆಯಿಂದ 3.30 ಗಂಟೆಯವರೆಗೆ ಮಹಾಜರನ್ನು ಜರಗಿಸಿರುವುದಾಗಿ ನುಡಿದಿರುತ್ತಾರೆ. ಸದರಿ ನಿ.ಪಿ 2 ಮಹಜರನಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲವೆಂದು, ಮಹಜರ ಸ್ಥಳದ ಚೆಕ್ಕುಬಂದಿ ಹೇಳಲಾಗುವುದಿಲ್ಲವೆಂದು ಹಾಗೂ ಮಹಾಜರ ಸಮಯದಲ್ಲಿ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲವೆಂದೂ ನುಡಿದಿರುತ್ತಾರೆ. ಅ.ಸಾ.2 ರವರಿಂದ ಸೂಕ್ತವಾದ ಬೆಂಬಲ ಸಾಕ್ಷ್ಯ ಲಭ್ಯವಾಗಿರುವುದಿಲ್ಲ. ಅ.ಸಾ.2 ರವರ ನುಡಿಸಾಕ್ಷ್ಯವು ಆರೋಪಿತರ ವಿರುದ್ಧ ಮಾಡಲಾದ ಆರೋಪಣೆಗಳನ್ನು ಸಾಬೀತುಪಡಿಸಲು ಯಾವುದೇ ರೀತಿಯಲ್ಲಿಯೂ ಸಹಕಾರಿಯಾಗಿರುವುದಿಲ್ಲ. ಸದರಿ ಅಂಶಗಳು ಅಭಿಯೋಜನೆಯ ಪ್ರಕರಣದ ಬಗ್ಗೆ ಸಂಶಯವನ್ನುಂಟು ಮಾಡುತ್ತದೆ.

16. ಅಭಿಯೋಜನೆಯವರು ಸಾಕ್ಷಿದಾರರ ಚಾ.ಸಾ.6 ವೈದ್ಯಾಧಿಕಾರಿರವರನ್ನು ಅಸಾ3 ಎಂದು ಒಳಪಡಿಸಿರುತ್ತಾರೆ. ಸದರಿಯವರು ತಮ್ಮ ವಿಚಾರಣೆಯಲ್ಲಿ ದಿನಾಂಕ 25.08.2020 ರಂದು ಸಂಜೆ 4:00 ಗಂಟೆ ಸುಮಾರಿಗೆ ಚಾ.ಸಾ.1 ರವರು ಹಲ್ಲೆಯ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಬಂದಿದ್ದು, ಅವರನ್ನು ಪರೀಕ್ಷಿಸಿ ನಿ.ಪಿ 3ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿರುವುದಾಗಿ ನುಡಿದಿರುತ್ತಾರೆ. ಯಾವುದೋ ಒಬ್ಬ ವ್ಯಕ್ತಿಗೆ ಮುದ್ದೆಮಾಲು 1 ಮತ್ತು 2ರಿಂದ ಹಲ್ಲೆ ಮಾಡಿದ ಸಂದರ್ಭದಲ್ಲಿ ನಿ.ಪಿ 3 ರಲ್ಲಿ ಕಾಣಿಸಿರುವ ಗಾಯಗಳು ಆಗಿರುವ ಸಾಧ್ಯತೆ ಇರುತ್ತದೆ ಎಂದು ನುಡಿದಿರುತ್ತಾರೆ. ಅ.ಸಾ.3 ರವರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿರುತ್ತಾರೆ. ಪಾಟಿ ಸವಾಲಿನಲ್ಲಿ ಯಾವುದೇ ಒಬ್ಬ ವ್ಯಕ್ತಿ ಗಟ್ಟಿ ವಸ್ತುವಿನ ಮೇಲೆ ಮತ್ತು ಚೂಪಾದ ವಸ್ತುವಿನ ಮೇಲೆ ಬಿದ್ದ ಸಂದರ್ಭದಲ್ಲಿ ನಿ.ಪಿ 3 ರಲ್ಲಿ ನಮೂದಿಸುವಂತ ಗಾಯಗಳು ಆಗುವ ಸಾಧ್ಯತೆ ಇದೆ ಎಂದು ಸೂಚಿಸಿದಾಗ ಹೌದು ಎಂದು ಒಪ್ಪಿಕೊಂಡಿರುತ್ತಾರೆ.

17. ಅಭಿಯೋಜನೆಯು ಸ್ಥಳ ಮತ್ತು ಜಪ್ತು ಪಂಚನಾಮೆಯ ಪಂಚರಾದ ಚಾಸಾ 4 ಹಾಗೂ ಚಾಸಾ 5 ರವರನ್ನು ಅಸಾ 4 ಹಾಗೂ ಅಸಾ 6 ಎಂದು ಈ ಪ್ರಕರಣದಲ್ಲಿ ವಿಚಾರಣೆಗೆ ಒಳಪಡಿಸಿರುತ್ತಾರೆ. ಅಸಾ 4 ಹಾಗೂ ಅಸಾ 6 ರವರು ಸ್ಥಳ ಮತ್ತು ಜಪ್ತು ಪಂಚನಾಮೆಯನ್ನು ನಿ.ಪಿ 2 ಎಂದು ಗುರುತಿಸಿದ್ದು ಮತ್ತು ಅದರಲ್ಲಿರುವ ಅವರ ಸಹಿಯನ್ನು ಗುರುತಿಸಿದ್ದರೂ ಸಹ ಪಂಚನಾಮೆಯಲ್ಲಿ ಬರೆದಿರುವ ವಿಚಾರಗಳನ್ನು ಸಂಪೂರ್ಣವಾಗಿ ಅಲ್ಲೆಗಳಿದ್ದಾರೆ. ನಿ.ಪಿ 2 ಸ್ಥಳ ಮತ್ತು ಜಪ್ತು ಪಂಚನಾಮೆಯನ್ನು ಯಾವ ವಿಚಾರಕ್ಕೆ ಮಾಡಿರುತ್ತಾರೆ ಗೊತ್ತಿಲ್ಲವೆಂದು, ಅಸಾ 4 ಮತ್ತು ಅಸಾ 6 ರವರ ಸಮಕ್ಷಮ ಪೊಲೀಸರು ಯಾವುದೇ ಮುದ್ದೆಮಾಲುಗಳನ್ನು ಜಪ್ತು ಪಡಿಸಿಕೊಂಡಿದ್ದು ಇರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ವಿಷಯದ ಬಗ್ಗೆ ಅಸಾ 4 ಮತ್ತು ಅಸಾ 6 ರವರನ್ನು ಅಭಿಯೋಜನೆಯ ಪರ ಪಾಟೀ ಸವಾಲು ಮಾಡಲಾಗಿದ್ದು, ಪಾಟೀ ಸವಾಲಿನಲ್ಲಿಯೂ ಅಭಿಯೋಜನೆಯು ಪ್ರತಿಪಾದಿಸುವ ಪಂಚನಾಮೆಯನ್ನು ರುಜುವಾತುಪಡಿಸುವಲ್ಲಿ ಸಹಕಾರಿಯಾಗಿರುವುದಿಲ್ಲ. ಅಭಿಯೋಜಕರು ತಮ್ಮ ಪ್ರಕರಣವನ್ನು ಅಸಾ 4 ಮತ್ತು ಅಸಾ 6ರವರ ಮೂಲಕ ಸಾಬೀತುಪಡಿಸಲು ವಿಫಲರಾಗಿರುತ್ತಾರೆ.

18. ಅಭಿಯೋಜನೆಯು ಪ್ರಕರಣದ ತನಿಖೆಯನ್ನು ಕೈಗೊಂಡ ಚಾಸಾ 7 ರವರನ್ನು ಅಸಾ 5 ಎಂದು ಈ ಪ್ರಕರಣದಲ್ಲಿ ವಿಚಾರಣೆಗೆ ಒಳಪಡಿಸಿರುತ್ತಾರೆ. ಸದರಿಯವರು ತಮ್ಮ ವಿಚಾರಣೆಯಲ್ಲಿ ದಿನಾಂಕ 25-08-2021 ರಂದು ನಾನು ಠಾಣಾ ಪ್ರಭಾರದಲ್ಲಿ ಇದ್ದಾಗ ನುಗ್ಗೇಹಳ್ಳಿ ಸರ್ಕಾರಿ ಆಸ್ಪತ್ರೆಯಿಂದ ಮೆಮೋ ಬಂದ ಮೇರೆಗೆ ಆಸ್ಪತ್ರೆಗೆ ಭೇಟಿ ನೀಡಿ, ಚಾಸಾ-1 ರವರು ಹಲ್ಲೆ ಬಗ್ಗೆ ನೀಡಿದ ದೂರನ್ನು ಸ್ವೀಕರಿಸಿ, ಠಾಣೆಗೆ ಬಂದು ಸಂಜೆ ಸುಮಾರು 05-30 ಗಂಟೆಗೆ ಪ್ರ.ವ.ವರದಿಯನ್ನು ತಯಾರಿಸಿ ಮಾನ್ಯ ಘನ ನ್ಯಾಯಾಲಯಕ್ಕೆ ಹಾಗೂ ನನ್ನ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡು, ಮೇಲಾಧಿಕಾರಿಗಳ ಮೌಖಿಕ ಆದೇಶದ ಮೇರೇಗೆ ದಿಃ 26-08-2021 ರಂದು ಚಾಸಾ-2 ರವರು ತೋರಿಸಿದ ಕೃತ್ಯ ನಡೆದ ಸ್ಥಳವನ್ನು ಚಾಸಾ-4

ಮತ್ತು 5 ರವರ ಸಮಕ್ಷವ ಬೇಳಿಗ್ಗೆ 10.00 ರಿಂದ 11.00 ಗಂಟೆಯವರೆಗೆ. ನಿ.ಪಿ. 2ರಂತೆ ಮಹಜರು ಕ್ರಮ ಜರುಗಿಸಿ, ನಿಪಿ-4 ಮತ್ತು 5 ರಂತೆ ಫೋಟೋಗಳನ್ನು ತೆಗೆದು , ಕೃತ್ಯಕ್ಕೆ ಉಪಯೋಗಿಸಿದ ಒಂದು ಕಾಡು ಜಾತಿಯ 3 ಅಡಿ ಉದ್ದದ ಕೋಲು ಹಾಗೂ ಎಡಮಟ್ಟೆಯನ್ನು ಅಮಾನತುಪಡಿಸಿಕೊಂಡಿರುವುದಾಗಿ ನುಡಿದಿರುತ್ತಾರೆ. ಪೊಲೀಸ್ ಠಾಣೆಯಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ದಾಖಲು ಮಾಡಿ, ಅಮಾನತುಪಡಿಸಿಕೊಂಡ ಮುದ್ದೆ ಮಾಲುಗಳನ್ನು ಠಾಣೆಗೆ ತಂದು ಪಿ.ಎಫ್. ಮುಖಾಂತರ ಮಾನ್ಯ ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡು, ದಿಃ 26.09.2020 ರಂದು ನುಗ್ಗೇಹಳ್ಳಿ ಸರ್ಕಾರಿ ಆಸ್ಪತ್ರೆಯಿಂದ ಚಾಸಾ-1 ರವರ ಗಾಯದ ಪ್ರಮಾಣಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡು, ತನಿಖೆ ಪೂರ್ಣಗೂಂಡ ನಂತರ ಆರೋಪಿತರ ವಿರುದ್ದ ದೋಷಾರೋಪಣ ಪಟ್ಟಿಯನ್ನು ಮಾನ್ಯ ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುವುದಾಗಿ ನುಡಿದಿರುತ್ತಾರೆ. ಆರೋಪಿಯ ಪರ ವಕೀಲರು ಮಾಡಿದ ಪಾಟಿ ಸವಾಲಿನಲ್ಲಿ, ಆರೋಪಿಯ ಪರ ವಕೀಲರು ನೀಡಿದ ಸಲಹೆಗಳನ್ನು ಅವರು ನಿರಾಕರಿಸಿದರು.

19. 1 ರಿಂದ 3 ರವರೆಗಿನ ಆರೋಪಿತರುಗಳು ಏಕೋದ್ದೇಶದಿಂದ ಸಾಕ್ಷಿ 1 ರವರ ಹತ್ತಿರ ಬಂದು ಆರೋಪಿ 1 ಮತ್ತು 2 ರವರು ಸಾಕ್ಷಿ 1 ರವರನ್ನು ಕುರಿತು ದಾರಿ ವಿಚಾರದಲ್ಲಿ ಅವಾಚ್ಯ ಶಬ್ದಗಳಿಂದ ಬೈದು , ಕೈಗಳಿಂದ, ಎಡೆಮಟ್ಟೆ ಮತ್ತು ದೊಣ್ಣೆಯಿಂದ ಸಾಕ್ಷಿ 1 ರವರ ತಲೆಗೆ, ಬೆನ್ನಿಗೆ ಕುತ್ತಿಗೆಗೆ ಹೊಡೆದು ನೋವುಂಟು ಮಾಡಿ, ಸಾಮಾನ್ಯ ಸ್ವರೂಪದ ಗಾಯಪಡಿಸಿ, ಕೊಲೆ ಬೆದರಿಕೆ ಹಾಕಿ ಹೋಗಿರುವುದಾಗಿ ಎಂದು ಕಲಿತ ಸಹಾಯಕ ಸರ್ಕಾರಿ ಅಭಿಯೋಜಕರು ತೀವ್ರವಾಗಿ ವಾದಿಸಿರುತ್ತಾರೆ ಮತ್ತು ಆಪಾದಿತ ಘಟನೆಯನ್ನು ಸಾಬೀತುಪಡಿಸಿದೆ ಎಂದು ವಾದಿಸಿದ್ದು ಆರೋಪಿತನನ್ನು ಶಿಕ್ಷೆಗೆ ಗುರಿ ಪಡಿಸುವಂತೆ ಪ್ರಾರ್ಥಿಸಿರುತ್ತಾರೆ. ಮತ್ತೊಂದೆಡೆ ಆರೋಪಿಯ ಪರ ವಕೀಲರು ಅಭಿಯೋಜನ ಪ್ರಕರಣ ಮತ್ತು ಸಾಕ್ಷಿಗಳ ಮೌಖಿಕ ಸಾಕ್ಷಿದಲ್ಲಿ ವ್ಯತ್ಯಾಸವಿರೋಧಗಿಯು ಹಾಗೂ ಸಾಕ್ಷಿದಾರರು ಅಭಿಯೋಜನ ಪ್ರಕರಣವನ್ನು ಬೆಂಬಲಿಸುತ್ತಿರುವುದಿಲ್ಲ ಹಾಗೂ ಆಪಾದಿತ ಘಟನೆಯನ್ನು ಸಾಕ್ಷಿಗಳ ಮೂಲಕ

ಸಾಬೀತುಪಡಿಸಲಾಗಿಲ್ಲ. ಯಾವುದೇ ಸ್ವತಂತ್ರ ಸಾಕ್ಷಿದಾರರು ಅಭಿಯೋಜನೆ ಪ್ರಕರಣವನ್ನು ಬೆಂಬಲಿಸಿದ್ದು ಇರುವುದಿಲ್ಲ. ಆದ್ದರಿಂದ ಆರೋಪಿತನನ್ನು ಖುಲಾಸೆಗೊಳಿಸಬೇಕೆಂದು ಪ್ರಾರ್ಥಿಸಲಾಗಿದೆ.

20. ಅಭಿಯೋಜನೆಯ ಪ್ರಕರಣಕ್ಕೆ ಪ್ರಮುಖ ಸಾಕ್ಷಿದಾರರಾದ ಅ.ಸಾ. 1 ರಿಂದ 5 ರವರಿಂದಲೇ ಸೂಕ್ತ ಬೆಂಬಲ ಸಾಕ್ಷ್ಯ ಲಭ್ಯವಾಗಿರುವುದಿಲ್ಲ. ಅ.ಸಾ. 1 ರವರು ಘಟನೆಯನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದು, ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅಭಿಯೋಜನೆಯ ಪ್ರಕರಣಕ್ಕೆ ಅ.ಸಾ.1 ರವರಿಂದಲೇ ಸೂಕ್ತ ಬೆಂಬಲ ಸಾಕ್ಷ್ಯ ಲಭ್ಯವಾಗಿರುವುದಿಲ್ಲ. ಅಭಿಯೋಜನೆಯು ಪ್ರತಿಪಾದಿಸುವ ಘಟನೆಯನ್ನು ಅ.ಸಾ. 1 ರವರು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಪ್ರಕರಣದ ಪ್ರಮುಖ ಸಾಕ್ಷಿದಾರರಾದ ಅಸಾ 1, ಅಸಾ 2, ರವರ ಸಾಕ್ಷ್ಯವು ಒಂದಕ್ಕೊಂದು ವ್ಯತಿರಿಕ್ತವಾಗಿದ್ದು, ಸದರಿ ಅಸಾ 1, ಅಸಾ 2 ರವರ ಸಾಕ್ಷ್ಯ ನಂಬಲು ಅರ್ಹವಾಗಿರುವುದಿಲ್ಲ. ಅಸಾ4, ಅಸಾ.6 ರವರು ಸ್ಥಳ ಮತ್ತು ಜಪ್ತು ಪಂಚನಾಮೆಯ ಪಂಚರಾಗಿದ್ದು, ಪ್ರತಿಕೂಲರಾಗಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ವನ್ನು ನುಡಿದಿರುತ್ತಾರೆ. ಸ್ಥಳ ಮತ್ತು ಜಪ್ತು ಪಂಚನಾಮೆಯ ಪಂಚರಾದ ಅಸಾ4 ಅಸಾ.6 ರವರು ಸಂಪೂರ್ಣವಾಗಿ ಅಭಿಯೋಜನೆಗೆ ಬೆಂಬಲಿಸಿದ್ದು ಇರುವುದಿಲ್ಲ. ಅಭಿಯೋಜನೆಯ ಹಾಜರುಪಡಿಸಲಾದ ಸಾಕ್ಷಾಧಾರಗಳು ಆರೋಪಿತರ ವಿರುದ್ಧ ಮಾಡಲಾದ ಆರೋಪಣೆಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ಸಹಕಾರಿಯಾಗಿರುವುದಿಲ್ಲ. ಆರೋಪಿತರ ವಿರುದ್ದ ಮಾಡಲಾದ ಆರೋಪಣೆಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸುವ ಹೊಣೆಗಾರಿಕೆ ಅಭಿಯೋಜನೆಯ ಮೇಲೆ ಇದ್ದು, ಅದನ್ನು ರುಜುವಾತುಪಡಿಸಲು ಅಭಿಯೋಜನೆಯು ವಿಫಲವಾಗಿರುತ್ತದೆ. ಆರೋಪಿತರು ಸದರಿ ಸಂಶಯದ ಲಾಭವನ್ನು ಹೊಂದಲು ಅರ್ಹರಾಗಿರುತ್ತಾರೆ. ಆದ ಕಾರಣ ಅಂಶ 1 ರಿಂದ 4 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

21. **ಅಂಶ 5** : ಮೇಲೆ ಚರ್ಚಿಸಲಾದ ಕಾರಣಗಳಿಗಾಗಿ, ಆರೋಪಿತರ ವಿರುದ್ಧ ಮಾಡಲಾದ ಆರೋಪಣೆಗಳನ್ನು ರುಜುವಾತುಪಡಿಸಲು ಅಭಿಯೋಜನೆಯು ಸಂಶಯಾತೀತವಾಗಿ ವಿಫಲವಾಗಿರುವುದರಿಂದ ನ್ಯಾಯಾಲಯವು ಈ ಕೆಳಗಿನಂತೆ ಆದೇಶಿಸುತ್ತದೆ.

**ಆದೇಶ**

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 255 (1) ರಡಿಯಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ ಆರೋಪಿತರು ಭಾರತೀಯ ದಂಡ ಸಂಹಿತೆಯ ಕಲಂ 504, 323, 324, 506 ಸಹವಾಚಕ ಕಲಂ.34 ರಡಿಯಲ್ಲಿನ ಆರೋಪಣೆಗಳಿಂದ ದೋಷಮುಕ್ತರೆಂದು ಪರಿಗಣಿಸಿ, ಅವರನ್ನು ಬಿಡುಗಡೆಗೊಳಿಸಿ ಆದೇಶಿಸಲಾಗಿದೆ.**

**ಆರೋಪಿತರು ಮತ್ತು ಅವರ ಪರ ಜಾಮೀನುದಾರರು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 437(ಎ) ರಡಿಯಲ್ಲಿ ಬರೆದುಕೊಟ್ಟಿರುವ ಮುಚ್ಚಳಿಕೆಯು ಆರು ತಿಂಗಳ ಅವಧಿಯವರೆಗೆ ಚಾಲ್ತಿಯಲ್ಲಿದ್ದು, ನಂತರದಲ್ಲಿ ರದ್ದಾಗತಕ್ಕದ್ದೆಂದು ಆದೇಶಿಸಲಾಗಿದೆ.**

**ಅಪೀಲು ಅವಧಿ ಮುಕ್ತಾಯದ ನಂತರ ಮುದ್ದೆ ಮಾಲು 1 ಮತ್ತು 2 ನ್ನು ನಾಶಪಡಿಸುವಂತೆ ಆದೇಶಿಸಲಾಗಿದೆ.**

(ಶೀಘ್ರಲಿಪಿಗಾರರಿಗೆ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ನೇರವಾಗಿ ಬೆರಳಚ್ಚು ಮಾಡಿ, ಗಣಕೀಕರಿಸಿ, ಸರಿಪಡಿಸಿ, ದಿನಾಂಕ 18.08.2026 ರಂದು ತೆರೆದ ನ್ಯಾಯಾಲಯದಲ್ಲಿ ತೀರ್ಪನ್ನು ಉಚ್ಚರಿಸಲಾಯಿತು)

(ಜೋಯ್ಲಿನ್ ಮೆಂಡೊನ್ಸಾ)
2ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.

**ಅನುಬಂಧ**

**ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ಪಟ್ಟಿ**

| | |
|---|---|
| ಅ.ಸಾ1 | : ಶಿವಕುಮಾರಸ್ವಾಮಿ |
| ಅ.ಸಾ2 | : ಕಾಳಶೆಟ್ಟಿ |
| ಅ.ಸಾ3 | : ಡಾಃ ಶ್ರೀಲತಾ |
| ಅ.ಸಾ4 | : ಮಂಜುನಾಥ |
| ಅ.ಸಾ5 | : ರಾಮಕೃಷ್ಣ |
| ಅ.ಸಾ6 | : ಶೇಖರ |

**ಆರೋಪಿಯ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ಪಟ್ಟಿ**

-ಇಲ್ಲಾ -

**ಅಭಿಯೋಜನೆಯ ಪರ ನಿಶಾನೆಗೊಳಿಸಲಾದ ದಾಖಲಾತಿಗಳ ಪಟ್ಟಿ**

| | |
|---|---|
| ನಿಪಿ. 1 | : ಪ್ರಾಸಾ.1 ರವರ ಹೇಳಿಕೆ |
| ನಿಪಿ.2 | : ಸ್ಥಳ ಮತ್ತು ಅಮಾನತ್ತು ಮಹಜರ್ |
| ನಿಪಿ. 2(ಎ) | : ಪ್ರಾಸಾ.6 ರವರ ಸಹಿ |
| ನಿಪಿ. 2(ಬಿ) | : ಪ್ರಾಸಾ.5 ರವರ ಸಹಿ |
| ನಿಪಿ.3 | : ಗಾಯದ ಪ್ರಮಾಣ ಪತ್ರ |
| ನಿಪಿ. 3(ಎ) | : ಪ್ರಾಸಾ.3 ರವರ ಸಹಿ |
| ನಿಪಿ. 3(ಬಿ) | : ಪ್ರಾಸಾ.5 ರವರ ಸಹಿ |
| ನಿಪಿ. 4 ಮತ್ತು 5 | : ಪೋಟೋಗಳು |
| ನಿಪಿ. 6 | : ದೂರು |
| ನಿಪಿ.6(ಎ) | : ಪ್ರಾಸಾ.5 ರವರ ಸಹಿ |
| ನಿಪಿ. 7 | : ಪ್ರಥಮ ವರ್ತಮಾನ ವರದಿ |

**ಆರೋಪಿ ಪರ ನಿಶಾನೆಗೊಳಿಸಲಾದ ದಾಖಲಾತಿಗಳ ಪಟ್ಟಿ**

-ಇಲ್ಲಾ-

**ಅಭಿಯೋಜನೆಯ ಪರ ಗುರುತಿಸಲಾದ ಮುದ್ದೆ ಮಾಲುಗಳು**

ಎಂ.ಒ.1: ದೊಣ್ಣೆ

ಎಂ.ಒ.2: ಎಡಮಟ್ಟೆ

sd/-
**2**ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.